# ಪಾರಾದೀಪ್ ಫಾಸ್ಫೇಟ್ಸ್ ಲಿಮಿಟೆಡ್

**ಮಂಗಳ ಭವನ, ಪಣಂಬೂರು, ಮಂಗಳೂರು – ೫೭೫೦೧೦**

## ಏಕೀಕೃತ ನಿರ್ವಹಣಾ ವ್ಯವಸ್ಥೆ ನೀತಿ

**(ಸುರಕ್ಷತೆ, ಆರೋಗ್ಯ, ಪರಿಸರ, ಗುಣಮಟ್ಟ, ಉತ್ಪನ್ನಗಳ ಸಂರಕ್ಷಣೆ ಮತ್ತು ಶಕ್ತಿಯ ನಿರ್ವಹಣೆಗಳನ್ನು ಒಳಗೊಂಡಿದೆ)**

**ಒಂದು ಜವಾಬ್ದಾರಿಯುತ ಕಾರ್ಪೋರೇಟ್ ಸಂಸ್ಥೆಯಾಗಿ, ನಾವು ಈ ಕೆಳಗಿನ ವಿಷಯಗಳಿಗೆ ಬದ್ಧರಾಗಿದ್ದೇವೆ:**

ಅ. ರಸಗೊಬ್ಬರ ಮತ್ತು ರಾಸಾಯನಿಕ ವಸ್ತುಗಳ ಉತ್ಪಾದನೆ ಮೊದಲಾದ ವ್ಯವಹಾರಗಳನ್ನು ಸುರಕ್ಷತೆ, ಆರೋಗ್ಯ, ಪರಿಸರ, ಗುಣಮಟ್ಟ (SHEQ) ಮತ್ತು ಶಕ್ತಿಯ ಬಳಕೆ, ಕಾರ್ಯಕ್ಷಮತೆ ಮತ್ತು ಉತ್ಪನ್ನಗಳ ಉತ್ತರದಾಯಿತ್ವಕ್ಕೆ ಸಂಬಂಧಿಸಿದ ಮತ್ತು ಅನ್ವಯಿಸುವ ಎಲ್ಲಾ ಕಾನೂನು ಮತ್ತು ಇನ್ನಿತರ ಅವಶ್ಯಕ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ನಡೆಸುವುದು.

ಆ. ಮಾಲಿನ್ಯವನ್ನು ತಡೆಯುವುದು, ವೃತ್ತಿ ಸಂಬಂಧಿತ ಸುರಕ್ಷತೆ ಮತ್ತು ಆರೋಗ್ಯಗಳ ಮೇಲಿನ ಅಪಾಯಗಳನ್ನು ಕಡಿಮೆ ಮಾಡುವುದು, ಶಕ್ತಿಯ ನಷ್ಟವನ್ನು ನಿಯಂತ್ರಿಸುವುದು ಅಲ್ಲದೆ ಸುರಕ್ಷತೆ, ಆರೋಗ್ಯ, ಪರಿಸರ, ಗುಣಮಟ್ಟ ಮತ್ತು ಶಕ್ತಿ ಕಾರ್ಯಕ್ಷಮತೆಗಳ ಒಟ್ಟು ನಿರ್ವಹಣೆಯನ್ನು ನಿರಂತರವಾಗಿ ಸುಧಾರಿಸುವ ಗುರಿಯೊಂದಿಗೆ ಕೆಲಸಮಾಡುವುದು.

**ಈ ಗುರಿಗಳನ್ನು ಸಾಧಿಸಲು, ನಾವು ಈ ಕೆಳಗಿನ ವಿಷಯಗಳಿಗೆ ಬದ್ಧರಾಗಿದ್ದೇವೆ -**

ಅ. ಸುರಕ್ಷಿತ ಮತ್ತು ಆರೋಗ್ಯಕರ ಕೆಲಸದ ಪರಿಸ್ಥಿತಿಗಳನ್ನು ಒದಗಿಸಿ, ವೃತ್ತಿ ಸಂಬಂಧಿತ ದೈಹಿಕ ಆಘಾತಗಳು ಮತ್ತು ಅಸ್ವಸ್ಥತೆಯನ್ನು ತಪ್ಪಿಸುವುದು.

ಆ. ನಮ್ಮ ಗ್ರಾಹಕರ, ಶಾಸನ ಸಂಬಂಧಿತ, ಹಾಗೂ ನಿಯಂತ್ರಕ ಸಂಸ್ಥೆಗಳ ಬೇಡಿಕೆಗಳನ್ನು ಸಮರ್ಪಕವಾಗಿ ಪೂರೈಸುವಂತಹ ಉತ್ಪನ್ನಗಳು ಮತ್ತು ಸೇವೆಗಳನ್ನು ಒದಗಿಸುವುದಲ್ಲದೆ ಅವರ ತೃಪ್ತಿಗೆ ಕಾರಣವಾಗುವುದು ಹಾಗೂ ವಿಶ್ವಾಸಾರ್ಹತೆ ಮತ್ತು ನಂಬಿಕೆಗಳನ್ನು ಗಳಿಸುವುದು.

ಇ. ನಮ್ಮ ಸುರಕ್ಷತೆ, ಆರೋಗ್ಯ, ಪರಿಸರ, ಗುಣಮಟ್ಟ ಮತ್ತು ಶಕ್ತಿಯ ಬಳಕೆಯ ಧ್ಯೇಯಗಳು ನಮ್ಮ ಚಟುವಟಿಕೆಗಳ ಸ್ವರೂಪ ಮತ್ತು ಪ್ರಮಾಣಗಳು, ಸಂಸ್ಥೆಯ ಉದ್ದೇಶ, ದಿಕ್ಕು ಕಾರ್ಯಸನ್ನಿವೇಶಗಳಿಗೆ ಪೂರಕವಾಗಿರುವಂತೆ ನೋಡಿಕೊಳ್ಳುವುದು.

ಈ. ಮಾಲಿನ್ಯದ  ತಡೆ, ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಣೆ,  ಶಕ್ತಿಯ ಬಳಕೆಯ ಕ್ಷಮತೆಯ ಸುಧಾರಣೆ ಮುಂತಾದುವುಗಳ ಮೂಲಕ ಪರಿಸರವನ್ನು ರಕ್ಷಿಸುವುದು ಹಾಗೂ ಸಂಪನ್ಮೂಲಗಳನ್ನು ಕಡಿಮೆ ಬಳಸುವ, ಮರುಪಡೆಯುವ, ಮರುಉತ್ಪಾದಿಸುವ ಮತ್ತು ಮರುಬಳಕೆಯ ವಿಧಾನಗಳನ್ನು ಅಳವಡಿಸಿಕೊಳ್ಳುವುದರ ಮೂಲಕ  ಸುಸ್ಥಿರ ಉತ್ಪಾದನೆಯನ್ನು ಪೋಷಿಸುವುದು.

ಉ. ಅಪಾಯದ ಮೂಲಗಳನ್ನು ನಿವಾರಿಸಿ, ವೃತ್ತಿ ಸಂಬಂಧಿ ಸುರಕ್ಷತೆ ಮತ್ತು ಆರೋಗ್ಯಗಳಿಗೆ ಆಗಬಹುದಾದ ವೃತ್ತಿ ಸಂಬಂಧಿ  ಅಪಾಯಗಳನ್ನು ಕಡಿಮೆಮಾಡುವುದು.

ಊ. ಪರಿಣಾಮಕಾರಿ ವ್ಯವಸ್ಥೆಗಳು ಮತ್ತು ಕ್ರಮಗಳನ್ನು ಅಳವಡಿಸುವುದರ ಮೂಲಕ  ಸುರಕ್ಷತೆ, ಆರೋಗ್ಯ, ಪರಿಸರ, ಗುಣಮಟ್ಟ ಮತ್ತು ಶಕ್ತಿಯ ಬಳಕೆಯ ಕ್ಷೇತ್ರಗಳಲ್ಲಿ ಅತ್ಯುತ್ತಮವಾದ ಪರಿಣಾಮವನ್ನು ಸಾಧಿ ಮತ್ತು ಅವುಗಳ ಪರಿಣಾಮಕಾರಿತ್ವದ ಮಟ್ಟವನ್ನು ನಿರಂತರ ನೋಡಿಕೊಳ್ಳುವುದು.

ಋ. ಉತ್ಪನ್ನಗಳ ಮೇಲಿನ ಉತ್ತರದಾಯಿತ್ವ ಮತ್ತು ಭದ್ರತೆ, ನವೀನತೆ, ತಂತ್ರಜ್ಞಾನ, ನಿರಂತರ ಸುಧಾರಣೆ ಮತ್ತು ಸುಸ್ಥಿರ ಕಾರ್ಯವಿಧಾನಗಳು ಮುಂತಾದುವುಗಳನ್ನು ಬಳಸಿಕೊಂಡು ಸುರಕ್ಷತೆ,

ಆರೋಗ್ಯ, ಪರಿಸರ, ಗುಣಮಟ್ಟ ಮತ್ತು ಶಕ್ತಿಯ ಬಳಕೆಯ ವಿಷಯಗಳಲ್ಲಿ ಸಾಧನೆಯನ್ನು ಬಲಪಡಿಸುವುದು.

ಎ. ಅಭಿವೃದ್ಧಿಯನ್ನು ಸುಸ್ಥಿರವಾಗಿ ಸಾಧಿಸುವ ನಮ್ಮ ಬದ್ಧತೆಯ ಅಂಗವಾಗಿ ನಮ್ಮ ಆವರಣದ ಒಳಗೂ ಹೊರಗೂ ವೃಕ್ಷಪೋಷಣೆಯಿಂದ ಹಸಿರು ಪಟ್ಟಿಯನ್ನು ಬೆಳೆಸಿ ನಿರ್ವಹಿಸುವುದು.

ಏ. ನೌಕರರು, ಗುತ್ತಿಗೆ ಕಾರ್ಮಿಕರು, ನೆರೆಹೊರೆಯ ಸಾರ್ವಜನಿಕರು ಮತ್ತು ಸಂಸ್ಥೆಗಾಗಿ ಅಥವಾ ಸಂಸ್ಥೆಯ ಪರವಾಗಿ ಕೆಲಸ ಮಾಡುವ ಎಲ್ಲಾ ವ್ಯಕ್ತಿಗಳಲ್ಲಿ ಸುರಕ್ಷತೆ, ಆರೋಗ್ಯ, ಪರಿಸರ ಮತ್ತು ಗುಣಮಟ್ಟಗಳ ಸಂರಕ್ಷಣೆ ಹಾಗೂ ಶಕ್ತಿಯ ಬಳಕೆಯ ಕ್ಷಮತೆ ಕುರಿತು ಜಾಗೃತಿ ಮೂಡಿಸುವುದು.

ಐ. ಸುರಕ್ಷತೆ, ಆರೋಗ್ಯ, ಪರಿಸರ ಮತ್ತು ಗುಣಮಟ್ಟಗಳ ಸಂರಕ್ಷಣೆ ಹಾಗೂ ಶಕ್ತಿಯ ಬಳಕೆಯ ವಿಷಯಗಳಲ್ಲಿ ನಿರಂತರ ಸುಧಾರಣೆಯನ್ನು ಸಾಧಿಸಲು ಅವಶ್ಯವಿರುವ ಮಾನವ ಮತ್ತು ಹಣಕಾಸಿನ ಸಂಪನ್ಮೂಲಗಳು ಹಾಗೂ ಅಗತ್ಯ ಮಾಹಿತಿಗಳು ಲಭ್ಯವಿರುವಂತೆ ನೋಡಿಕೊಳ್ಳುವುದು.

ಒ. ಸುರಕ್ಷತೆ, ಆರೋಗ್ಯ ಮತ್ತು ಪರಿಸರ ಸಂಬಂಧಿ ಕಾರ್ಯಕ್ರಮಗಳಲ್ಲಿ ಎಲ್ಲಾ ನೌಕರರ, ಗುತ್ತಿಗೆದಾರರ, ಕಾರ್ಮಿಕರ ಮತ್ತು ಕಾರ್ಮಿಕರ ಪ್ರತಿನಿಧಿಗಳ ಪಾಲ್ಗೊಳ್ಳುವಿಕೆಯನ್ನು ಮತ್ತು ಅವರ ಜೊತೆ ಸಂವಾದವನ್ನು ಖಚಿತಪಡಿಸುವುದು.

ಓ. ಅವಕಾಶವಿರುವ ಕಡೆಗಳಲ್ಲಿ ಶಕ್ತಿಯ ಬಳಕೆಯ ಕ್ಷಮತೆಯನ್ನು ಹೆಚ್ಚಿಸುವ ಉತ್ಪನ್ನಗಳು, ಯಂತ್ರೋಪಕರಣಗಳು, ಮತ್ತು ಸೇವೆಗಳನ್ನು ಕೊಳ್ಳುವುದು ಅಥವಾ ಬಳಸಿಕೊಳ್ಳುವುದು ಮತ್ತು ನವೀಕರಿಸಬಹುದಾದ ಶಕ್ತಿ ಮೂಲಗಳ ಬಳಕೆಯ ಸಾಧ್ಯತೆಯನ್ನು ಪರಿಶೀಲಿಸುವುದು.

ಔ. ಸೌಲಭ್ಯಗಳ ಉನ್ನತೀಕರಣ, ಕಾರ್ಯವಿಧಾನಗಳ ಸುಧಾರಣೆ, ಮತ್ತು ನೂತನ ಯೋಜನೆಗಳ ವಿನ್ಯಾಸಗಳಲ್ಲಿ ಶಕ್ತಿಯ ಬಳಕೆಯ ಉನ್ನತದಕ್ಷತೆಯ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು.

**ಈ ನೀತಿಯನ್ನು ನಿಯಮಿತವಾಗಿ ಪರಿಶೀಲಿಸಲಾಗುತ್ತದೆ ಮತ್ತು ಅಗತ್ಯಕಂಡುಬಂದಲ್ಲಿ ಸುಧಾರಿಸಲಾಗುತ್ತದೆ. ಇದು ಸಾರ್ವಜನಿಕರಿಗೆ ಬೇಡಿಕೆಯ ಮೇರೆಗೆ ಲಭ್ಯವಿದೆ.**

**ಸ್ಥಳ: ಮಂಗಳೂರು**
**ದಿ : 27-11-2025**

Suresh Krishnan
**ಎನ್. ಸುರೇಶ್ ಕೃಷ್ಣನ್**
**ಆಡಳಿತ ನಿರ್ದೇಶಕರು**